

*With Best Compliments from:*

# M/s P. Balasubba Setty & Son.



M/s PBS & SON - New Corporate Office - Bellary Road, HOSPET



Working Place of M/s PBS & SON Iron Ore Mines

**The Founder of the firm : Late Sri P. Balasubba Setty**

## MINE OWNERS – HOSPET

## Iron Ore Fines and Calibrated Iron Ore

**Corporate Office:**

**P.B. No. 03, 22nd Ward, Bellary Road, HOSPET – 583 201,**
**Bellary Dist. Karnataka State**
**Phone: 08394-265595, 265366 Fax: 08394-265355.**
**E-mail: pbsandson@gmail.com : pbssons.2008@rediffmail.com**

## ಸಂಪಾದಕೀಯ

# ‘ನಾಮ’ದ ಹಿಂದೆ, ಮುಂದೆ

ನಮಗೆ ಅತ್ಯಂತ ಪ್ರಿಯರಾಗಿರುವವರ ಹೆಸರು ಕಿವಿಗೆ ಬಿದ್ದೊಡನೆ ನಮ್ಮ ಅಂತರಂಗವೆಲ್ಲ ಹರ್ಷದಿಂದ ಪುಳಕಿತವಾಗುತ್ತದೆ. ಅರಿತೋ, ಅರಿಯದೆಯೋ ಅವರ ಚಿತ್ರ ಕಣ್ಣಮುಂದೆ ಬರುತ್ತದೆ. ಅವರ ಮಾತುಗಳೇ ಕೇಳಿಸುತ್ತವೆ; ಅವರ ಮಧುರ ಸ್ಮೃತಿಯಲ್ಲಿ ತೇಲಿಹೋಗುತ್ತೇವೆ. ಒಂದೆರಡು ಸಲವಾದರೂ ಅವರ ಹೆಸರನ್ನು ಬಾಯಲ್ಲಿ ಹೇಳಿಕೊಳ್ಳುತ್ತೇವೆ. ಹೆಸರು ಮಾಡುವ ಮ್ಯಾಜಿಕ್ ಈ ಬಗೆಯದು. ‘ಹೆಸರಿನಲ್ಲೇನಿದೆ?’ ಎಂದು ಎಷ್ಟೇ ಹೇಳಿಕೊಂಡರೂ ನಮಗೆಲ್ಲ ಗೊತ್ತಿದೆ, ಬೇರೆ ಯಾವುದನ್ನೂ ಮಾಡಲಾಗದ ಕೆಲಸವನ್ನು ಹೆಸರು ಮಾಡುತ್ತದೆ. ‘ನನ್ನ ಹೆಸರು ಹೇಳಿನೋಡು, ಕೆಲಸ ಆಗುತ್ತದೆ’ ಎಂಬ ಮಾತಿನ ಹಿಂದೆ ಅಡಗಿರುವ ಅರ್ಥವನ್ನೇ ಗಮನಿಸೋಣ. ಅದನ್ನೇ ಬಿಡಿಸಿ ನೋಡಿದರೆ ಹೀಗನ್ನಬೇಕು: ‘ನನ್ನ ಹೆಸರೆಂದರೆ ಬರಿ ಹೆಸರಲ್ಲ. ಅದರ ಹಿಂದೆ ನನ್ನ ವ್ಯಕ್ತಿತ್ವವಿದೆ; ನನ್ನ ಶಕ್ತಿಸಾಮರ್ಥ್ಯಗಳಿವೆ, ನಾನು ಮಾಡಿದ ಮಹತ್ಕಾರ್ಯಗಳಿವೆ. ನನ್ನ ಹೆಸರನ್ನು ಹೇಳಿದರೆ ಸಾಕು, ನನ್ನ ಈ ಎಲ್ಲ ಗುಣಗಳೊಂದಿಗೆ ನನ್ನ ವ್ಯಕ್ತಿತ್ವದ ಸಮಗ್ರ ಅಂಗಗಳೂ ಕಣ್ಣಮುಂದೆ ಬರಬೇಕು. ಆದ್ದರಿಂದ ನನ್ನ ಹೆಸರನ್ನು ಹೇಳುವ ಮೂಲಕ ನಾನು ಪರೋಕ್ಷವಾಗಿ ಅಲ್ಲೇ ಇದ್ದು ಕೆಲಸ ಮಾಡಿದಂತಾಯಿತು. ಹೀಗಾಗಿ ನಾನು ಬೇರೆಯಲ್ಲ, ನನ್ನ ಹೆಸರು ಬೇರೆಯಲ್ಲ. ನನ್ನ ಹೆಸರಿನ ಬಲ ಈ ಮಟ್ಟದ್ದು!’ ಲೌಕಿಕ ವ್ಯವಹಾರಗಳಲ್ಲಿ ಕಂಡು ಬರುವ ಈ ಸಣ್ಣ ಉದಾಹರಣೆ ಹೆಸರು ಮತ್ತು ಅದರ ಹಿಂದಿರುವ ವ್ಯಕ್ತಿತ್ವದ ನಡುವಿನ ಬಿಡಿಸಲಾಗದ ಸಂಬಂಧವನ್ನು ತೋರಿಸಿಕೊಡುತ್ತದೆ. ಈ ವಿಚಾರದ ಹಿಂದಿರುವ ತತ್ತ್ವವನ್ನು ಹುಡುಕುತ್ತ ಹೋದರೆ ಶಬ್ದ ಹಾಗೂ ಅರ್ಥ ಇವುಗಳ ಸಂಬಂಧವನ್ನು ಕುರಿತು ಆಳವಾಗಿ ಚಿಂತಿಸಬೇಕು. ಒಂದು ಹಂತದಲ್ಲಿ ಅವರೆಡೂ ಒಂದಾಗುತ್ತವೆ. ಆಧ್ಯಾತ್ಮಿಕ ದೃಷ್ಟಿಯಲ್ಲಿ ಈ ಸಂಬಂಧ ಅತ್ಯಂತ ಮಹತ್ವದ್ದಾಗಿದೆ.

### ನಾಮದ ಮೂಲ

ಧಾರ್ಮಿಕ, ಆಧ್ಯಾತ್ಮಿಕ ಪರಂಪರೆಗಳಲ್ಲಿ ಈ ವಿಶಿಷ್ಟ ಸಂಬಂಧವನ್ನು ಕುರಿತು ಸಾರ್ವತ್ರಿಕವಾಗಿ ಸ್ತುತಿಸಲಾಗಿದೆ. ಅಲ್ಲಿ ‘ನಾಮ’ ಎಂಬ ಮಾತಿನ ಮೂಲಕ ಭಗವಂತನ ಹೆಸರು, ಪರಮಾತ್ಮನ ನಾಮಧೇಯ, ಪರಬ್ರಹ್ಮನ ಸೂಚಕವಾದ ಪದ, ಅಲೌಕಿಕ ಸತ್ಯದ ಅಮೂರ್ತ ಅಸ್ತಿತ್ವದ ಶಬ್ದಸಂಕೇತ – ಹೀಗೆ ಈ ಹೆಸರನ್ನು ನಿರ್ದೇಶಿಸಲಾಗಿದೆ. ಸರ್ವಸಂಗಗಳನ್ನು ತೊರೆದ, ಸಂಪೂರ್ಣವಾಗಿ ತಮ್ಮನ್ನು ಭಗವಂತನಿಗೆ ಸಮರ್ಪಿಸಿಕೊಂಡ ಸಾಧುಸಂತರಂತೂ, ‘ನಾಮವನ್ನು ಬಿಟ್ಟು ಬೇರೇನೂ ಇಲ್ಲ; ಇಡೀ ಜಗತ್ತೇ ನಾಮದಿಂದ ತುಂಬಿಕೊಂಡಿದೆ’ ಎನ್ನುವವರೆಗೂ ಹೋಗುತ್ತಾರೆ. ಇಲ್ಲಿ ಸಹಜವಾಗಿ ಒಂದು ಪ್ರಶ್ನೆಯೇಳುತ್ತದೆ: ಆಧ್ಯಾತ್ಮಿಕ ಜಗತ್ತಿನಲ್ಲಿ ‘ನಾಮ’ಕ್ಕೆ ಇಷ್ಟೊಂದು ಪ್ರಾಧಾನ್ಯವೇಕೆ?

ಇದಕ್ಕೆ ಸರಳ ಉತ್ತರ: ಅದು ಭಗವಂತನೇ ಆಗಿರುವುದರಿಂದ.

ಶ್ರೀರಾಮಕೃಷ್ಣರು ಅನೇಕ ಬಾರಿ ಹೇಳುತ್ತಾರೆ, ‘‘ನಾಮ-ನಾಮಿ ಅಭೇದ’’ ಎಂದು. ಇದೇನೂ ಹೊಸ ಮಾತಲ್ಲ, ಹೊಸ ತತ್ತ್ವವಲ್ಲ. ಷಡ್ದರ್ಶನಗಳು ಈ ಮಾತನ್ನೇ ತಾತ್ತ್ವಿಕ ವಿಚಾರಗಳ ಮೂಲಕ ಪ್ರತಿಪಾದಿಸುತ್ತವೆ. ಭಕ್ತಿಪರಂಪರೆ ಅದನ್ನೇ ಅನುಭವದ ಹಿನ್ನೆಲೆಯಲ್ಲಿ ವಿವರಿಸುತ್ತವೆ. ಆದರೆ ಶ್ರೀರಾಮಕೃಷ್ಣರಲ್ಲಿ ಈ ಮಾತು ಕೇವಲ ಸ್ತುತಿಯ ಮಾತಲ್ಲ, ಉತ್ಪ್ರೇಕ್ಷೆಯ ನುಡಿಯಲ್ಲ; ತಾತ್ತ್ವಿಕ ನಿರ್ಣಯವೂ ಅಲ್ಲ. ಅವರ ಪಾಲಿಗೆ ಅದು ಜೀವಂತ ಅನುಭವ; ಪ್ರತಿಕ್ಷಣವೂ ಕಣ್ಣಮುಂದೆ ಕಾಣಿಸುವ ಅಲೌಕಿಕ ದರ್ಶನ, ಆಧ್ಯಾತ್ಮಿಕ ಅನುಭೂತಿ. ಕೃಷ್ಣನ ಹೆಸರು ಕಿವಿಗೆ ಬಿದ್ದ ಕೂಡಲೇ ಅವರಲ್ಲಿ ಭಾವಪರಿವರ್ತನೆಯಾಗುತ್ತದೆ; ಕಣ್ಣುಗಳಲ್ಲಿ ಧಾರಕಾರವಾಗಿ ನೀರು ಸುರಿಯತೊಡಗುತ್ತದೆ. ‘ಎಲ್ಲಿ ನನ್ನ ಕೃಷ್ಣ?’ ಎನ್ನುತ್ತ ಅವರು ವೃಂದಾವನದಲ್ಲೆಲ್ಲ ಅರಸತೊಡಗುತ್ತಾರೆ. ಕೃಷ್ಣನ ದರ್ಶನದಿಂದ ಜಗತ್ತು ಮರೆತುಹೋಗುತ್ತದೆ. ಇದೇ ರೀತಿ ಕಾಳಿ, ರಾಮ, ಶಿವ, ದುರ್ಗಾ – ಎಲ್ಲರ ದರ್ಶನವಾಗುತ್ತದೆ. ಇಂಥ ಘನೀಭೂತವಾದ ದರ್ಶನ ಭಾವಸಮಾಧಿಯಲ್ಲಿ ಕೊನೆಗೊಳ್ಳುವುದು, ಅವರು ಬಾಹ್ಯಜ್ಞಾನಶೂನ್ಯರಾಗಿ ನಿಂತುಬಿಡುತ್ತಿದ್ದರು. ಇದು ಒಂದರಡು ಬಾರಿ ನಡೆದುಹೋದ ಘಟನೆಯಲ್ಲ; ಅವರ ಜೀವನದಲ್ಲಿ ಪ್ರತಿದಿನವೂ, ಆಗಾಗ ನಡೆಯುತ್ತಿದ್ದ ಅಭೂತಪೂರ್ವ ಸಂಗತಿ. ಕೇವಲ ದೇವರ ನಾಮದ ಉಚ್ಚಾರವೊಂದೇ ಸಾಕು, ಅವರ ಅನುಭವ ಪರಂಪರೆ ಬಾಹ್ಯಪ್ರಪಂಚದಿಂದ ಅವರನ್ನು ಹಂತಹಂತವಾಗಿ ಮೇಲಿನ ಸ್ತರಕ್ಕೊಯ್ದು, ದಿವ್ಯ ನೆಲೆಯ ಪ್ರಜ್ಞೆಯ ಆಳಕ್ಕೆ ಅವರನ್ನು ತಳ್ಳಿಬಿಡುತ್ತಿತ್ತು. ‘ನಾಮ-ನಾಮಿ ಅಭೇದ’ ವೆಂಬ ಮಾತು ಅವರ ಬಾಯಿಯಿಂದ ಹಲವು ಬಾರಿ ಬಂದಿದ್ದರೆ, ಅದಕ್ಕೆ ಹಿನ್ನೆಲೆಯಾಗಿ ನಿಲ್ಲುವುದು ಈ ಸಂತ ಅನುಭವಗಳೇ.

### ಮೂಲ ಸೆಲೆ ಹುಡುಕಿ

ಲೌಕಿಕ ಪ್ರಪಂಚಕ್ಕೇ ಅಂಟಿಕೊಂಡಿರುವ ನಮಗೆಲ್ಲ ಇಲ್ಲೊಂದು ಪ್ರಶ್ನೆ ಏಳಬಹುದು: ಭಗವಂತ ಹಾಗೂ ಅವನ ನಾಮ ಇವೆರಡೂ ಒಂದೇ ಆಗಿದ್ದರೆ, ಅದನ್ನು ಹೇಗೆ ಕಂಡುಕೊಳ್ಳುವುದು? ಸ್ವತಃ ನಮಗೇ ಅನುಭವವಾಗದೆ ಅದನ್ನು ಏಕೆ ನಂಬಬೇಕು?

ಇಲ್ಲಿ ಶ್ರದ್ಧೆಯನ್ನು ಅವಲಂಬಿಸುವುದು ಅತ್ಯಂತ ಮುಖ್ಯವಾಗಿದೆ. ಭಗವಂತನನ್ನು ಕಾಣುವವರೆಗೂ ಅವನ ಅಸ್ತಿತ್ವವನ್ನೇ ನಂಬಲಾರೆ ಎಂಬ ದಿಟ್ಟತನದ ಮಾತು ತಾರ್ಕಿಕವಾಗಿ ಸರಿಕಾಣಬಹುದು. ಆದರೆ ಆಧ್ಯಾತ್ಮಿಕ ಮಾರ್ಗದಲ್ಲಿ ಅದನ್ನೊಂದು ತಡೆಯೆಂದೇ ಪರಿಗಣಿಸುತ್ತಾರೆ. ಶ್ರದ್ಧೆ, ವಿಶ್ವಾಸ ಇವು ಎಲ್ಲವಕ್ಕೂ ಮೂಲ. ಪ್ರಪಂಚದ ಬಗ್ಗೆ, ತನ್ನ ಬಗ್ಗೆ, ಅಸ್ತಿತ್ವದ ಬಗ್ಗೆ ಅವಿಶ್ವಾಸ ಹೊಂದಿರುವ ವ್ಯಕ್ತಿಗೆ ದೃಢವಾದ ಅವಲಂಬನೆಯಿಲ್ಲದೆ, ಯಾವ ಸಾಧನೆಯೂ ಅಶಕ್ಯವೆನಿಸುವುದು.